# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 241
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 14-09-2022
ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹತ್ತು ವರ್ಷಕ್ಕೊಮ್ಮೆ ನಡೆಯಬೇಕಾದ ಜನಗಣತಿ ಕಳೆದ ಸಾಲಿನಲ್ಲಿ ಜರುಗದ ಕಾರಣ ಜನಸಂಖ್ಯಾ ಆಧಾರಿತ ಯೋಜನೆಗಳನ್ನು ರೂಪಿಸಲು ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋವಿಡ್-19ರ ಸಾಂಕ್ರಾಮಿಕ ರೋಗದ ಪರಿಣಾಮದಿಂದಾಗಿ 2021ರ ಜನಗಣತಿ ಕಾರ್ಯವು ಮುಂದಿನ ಆದೇಶದವರೆಗೂ ಮುಂದೂಡಲ್ಪಟ್ಟಿದೆ ಎಂದು ಭಾರತ ಸರ್ಕಾರದ ಜನಗಣತಿ ನಿರ್ದೇಶನಾಲಯವು ದಿನಾಂಕ: 25.03.2020 & 14.02.2022ರ ಪತ್ರಗಳಲ್ಲಿ ತಿಳಿಸಿದೆ. 2011ರ ಜನಗಣತಿ ಆಧಾರದ ಮೇಲೆ ಜಿಲ್ಲಾವಾರು ತಾಲ್ಲೂಕುವಾರು ಜನಸಂಖ್ಯೆಯನ್ನು ಇತ್ತೀಚಿನ ವರ್ಷಗಳಿಗೆ ಯೋಜಿಸಿ (Projected) ಸದರಿ ಜನಸಂಖ್ಯೆಯನ್ನು ಜನಸಂಖ್ಯೆ ಆಧಾರಿತ ಯೋಜನೆಗಳಿಗೆ ಉಪಯೋಗಿಸಲಾಗುತ್ತಿದೆ. |
| ಆ) | ಇದರಿಂದಾಗಿ, ಸ್ಥಳೀಯ ನಗರ ಸಂಸ್ಥೆಗಳು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಕ್ಷೇತ್ರ ಮರುವಿಂಗಡಣೆ ಮೇಲೂ ಪರಿಣಾಮ ಬೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಂವಿಧಾನದ 73ನೇ ತಿದ್ದುಪಡಿ ಅಧಿನಿಯಮ, 1992 ರ ಪರಿಚ್ಛೇಧ 243-ಎಫ್ ರಲ್ಲಿ ಜನಸಂಖ್ಯೆ ಎಂದರೆ ಈ ಹಿಂದಿನ ಕೊನೆಯ ಬಾರಿಯ ಜನಗಣತಿಯ ಮೇರೆಗೆ ಖಚಿತಪಡಿಸಿಕೊಂಡು ಮತ್ತು ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು ಪ್ರಕಟವಾಗಿರುವ ಜನಸಂಖ್ಯೆ ಎಂದಿರುತ್ತದೆ. ಈ ಕಾರಣಗಳಿಂದ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರ ಮರು ವಿಂಗಡಣೆಯನ್ನು 2011ರ ಜನಗಣತಿಯ ಅಂಕಿ ಸಂಖ್ಯೆಯನ್ನು ಆಧರಿಸಿ ನಿರ್ಧರಿಸಲಾಗುತ್ತಿದೆ.<br><br>ಕೋವಿಡ್-19ರ ಪರಿಣಾಮ 2021ರ ಜನಗಣತಿಯನ್ನು ಮುಂದೂಡಲ್ಪಟ್ಟಿರುವುದರಿಂದ, ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್ ವಿಂಗಡಣೆಯನ್ನು 2011ರ ಜನಗಣತಿಯನ್ನಾಧರಿಸಿ ಕೈಗೊಳ್ಳಲಾಗುತ್ತಿದೆ. |
| ಇ) | ಬಂದಿದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಪಿಡಿಎಸ್ 114 ಪಿಆರ್ಐ 2022

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು